## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1533(1877) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 23.03.2026 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ಫೀಲ್ಡ್ ಟ್ರಿಪ್‌ಗೆ ಕರೆದೊಯ್ಯಲು ಸರ್ಕಾರದಿಂದ ನೀಡುವ ಸೌಲಭ್ಯಗಳೇನು; ವಾಹನ ಮತ್ತು ಪ್ರಯಾಣದ ವೆಚ್ಚ ನೀಡುವ ಅವಕಾಶವಿದೆಯೇ; ಇಲ್ಲದೆ ಇದ್ದಲ್ಲಿ ಫೀಲ್ಡ್ ಟ್ರಿಪ್ ಏರ್ಪಡಿಸುವ ಬಗೆ ಹೇಗೆ; ಸದರಿ ವೆಚ್ಚಪಾವತಿಸುವವರು ಯಾರು; | ಪೋಷಕರ ಒಪ್ಪಿಗೆ ಪಡೆದ ಮಕ್ಕಳನ್ನು ಕ್ಷೇತ್ರ ಭೇಟಿಗೆ ಕರೆದುಕೊಂಡು ಹೋಗಲು ಆಯುಕ್ತಾಲಯದ ಸುತ್ತೋಲೆ ದಿನಾಂಕ:21.11.2023, ದಿನಾಂಕ: 14.11.2022 ಮತ್ತು ದಿನಾಂಕ: 27.01.2011ರಲ್ಲಿ ಶೈಕ್ಷಣಿಕ ಪ್ರವಾಸದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳು ಮತ್ತು ಅನುಸರಿಸಬೇಕಾದ ನಿಯಮಗಳ ಬಗ್ಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ.<br>➢ **ಪಿ.ಎಂ.ಶ್ರೀ ಶಾಲಾ ವಿದ್ಯಾರ್ಥಿಗಳಿಗೆ ಕ್ಷೇತ್ರ ಭೇಟಿ (Exposure visit):** ರಾಜ್ಯದಲ್ಲಿ ಒಟ್ಟು 590 ಪಿ.ಎಂ.ಶ್ರೀ ಶಾಲೆಗಳಿದ್ದು, ಇವುಗಳ ಪೈಕಿ 541 ಪಿ.ಎಂ.ಶ್ರೀ ಶಾಲಾ ವಿದ್ಯಾರ್ಥಿಗಳು ಶಾಲೆಯ ಸುತ್ತಮುತ್ತಲಿನ ಪ್ರಗತಿಪರ ರೈತರು, ತೋಟದ ಬೆಳೆಗಾರರು ಹಾಗೂ ಇತರೆ ಸಾಧನೆ ಮಾಡಿರುವ ಜನರ ಜಮೀನು, ತೋಟ, ಹೈನುಗಾರಿಕೆ, ಡೈರಿ, ಎರೆಹುಳು ಸಾಕಣೆ ಮುಂತಾದ ಕಡೆಗಳಿಗೆ ಹೋಗಿ ವಿಷಯ ಜ್ಞಾನವನ್ನು ಪಡೆಯಲು ಹಾಗೂ ಅವುಗಳನ್ನು ತಮ್ಮ ಶಾಲೆ/ ಮನೆಗಳಲ್ಲಿ ಅಳವಡಿಸಿಕೊಳ್ಳಲು ಕ್ಷೇತ್ರ ಭೇಟಿಯನ್ನು ಆಯೋಜಿಸಲಾಗುತ್ತಿದೆ. ಸದರಿ ಭೇಟಿ ಸಂದರ್ಭದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಇಲಾಖೆಯಿಂದ ಹೊರಡಿಸಿರುವ ಸುತ್ತೋಲೆಯಂತೆ ಕ್ರಮವಹಿಸಲು ತಿಳಿಸಲಾಗಿದೆ.<br><br>2025-26 ನೇ ಸಾಲಿನಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.500/- ರಂತೆ ಒಟ್ಟು 93,677 ವಿದ್ಯಾರ್ಥಿಗಳಿಗೆ ಕ್ಷೇತ್ರ ಭೇಟಿಗೆ ಅವಕಾಶ ಕಲ್ಪಿಸಿದೆ. ಅನುದಾನವನ್ನು ಶಾಲಾ ಹಂತಕ್ಕೆ ಬಿಡುಗಡೆ ಮಾಡಲಾಗಿದೆ.<br><br>➢ **ಕೆ.ಜಿ.ಬಿ.ವಿ (KGBV) (Type-4)** ವಿದ್ಯಾರ್ಥಿನಿಯರು ಆಯಾ ಜಿಲ್ಲೆಗಳ ಐತಿಹಾಸಿಕ ಪ್ರಸಿದ್ಧ ಸ್ಥಳಗಳಿಗೆ, ಕೈಗಾರಿಕಾ ಪ್ರದೇಶಗಳಿಗೆ, ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಿಗೆ ಕ್ಷೇತ್ರ ಭೇಟಿ ನೀಡಿ ವಿದ್ಯಾರ್ಥಿನಿಯರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಹಾಗೂ ಶಿಕ್ಷಣದ ಜೊತೆಗೆ ಮನರಂಜನೆಯನ್ನು ಕೂಡ ಒದಗಿಸಿ, ಕಲಿಕೆಯನ್ನು ರಂಜನೀಯವಾಗಿಸುತ್ತದೆ.<br>ಕಸ್ತೂರಿ ಬಾ ಗಾಂಧಿ ಬಾಲಿಕ Type-4 ವಸತಿ ನಿಲಯಗಳಲ್ಲಿರುವ 9 ರಿಂದ 12 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪ್ರತಿ ವಿದ್ಯಾರ್ಥಿನಿಗೆ ರೂ.500/- ರಂತೆ ಪಿ.ಎ.ಬಿಯಲ್ಲಿ ಅನುಮೋದನೆಯಾಗಿರುವಂತೆ 2025-26 ನೇ ಸಾಲಿಗೆ 7150 ವಿದ್ಯಾರ್ಥಿನಿಯರಿಗೆ ಕ್ಷೇತ್ರ ಭೇಟಿಗೆ ಅವಕಾಶ ಕಲ್ಪಿಸಿದೆ. ಅನುದಾನವನ್ನು ಶಾಲಾ ಹಂತಕ್ಕೆ ಬಿಡುಗಡೆ ಮಾಡಲಾಗಿದೆ.<br><br>**ಸಮನ್ವಯ ಶಿಕ್ಷಣದಡಿಯಲ್ಲಿ ಜಿಲ್ಲಾ ಮಟ್ಟದ ಕ್ರೀಡಾ & ಕ್ಷೇತ್ರ ಭೇಟಿ (Sports and Exposure Visit):** 2025-26 ನೇ ಸಾಲಿನಲ್ಲಿ ಅರ್ಹ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಕ್ರೀಡಾ ಆಸಕ್ತಿಯನ್ನು ಉತ್ತೇಜಿಸಲು ಹಾಗೂ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವಂತಹ ಸಂಸ್ಥೆಗಳು ಹಾಗೂ ಕ್ಷೇತ್ರಗಳಿಗೆ ಭೇಟಿ ನೀಡುವ ಸಲುವಾಗಿ ರಾಜ್ಯದಲ್ಲಿರುವ ಒಟ್ಟು 204 ಶೈಕ್ಷಣಿಕ ಬ್ಲಾಕುಗಳಿಗೆ ಪ್ರಾಥಮಿಕ |

| | | |
|---|---|---|
| | | ವಿಭಾಗದಲ್ಲಿ ರೂ.25735/- ಪ್ರೌಢ ವಿಭಾಗಕ್ಕೆ ರೂ 25735/- ಗಳಂತೆ ಒಟ್ಟು ರೂ 105.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br>**ವೃತ್ತಿ ಶಿಕ್ಷಣದ** ಅಡಿಯಲ್ಲಿ 6 ಸೆಕ್ಟರ್ ನಲ್ಲಿ ನಡೆಯುತ್ತಿದ್ದು, ರಾಜ್ಯದ 9 ರಿಂದ 12ನೇ ತರಗತಿಯವರೆಗೆ 384 ಶಾಲೆಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಂಡಿದ್ದು, ಪ್ರತಿ ತರಗತಿಗೆ ವರ್ಷಕ್ಕೆ 02 ಕ್ಷೇತ್ರ ಸಂದರ್ಶನ (Field Visit)ಗಳನ್ನು ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಬರಲು ಶಾಲೆಗಳಿಂದ ವೃತ್ತಿ ತರಬೇತುದಾರರನ್ನು ನಿಯೋಜಿಸಿದ್ದು, ಅಗತ್ಯ ಸಾರಿಗೆ ವೆಚ್ಚಕ್ಕಾಗಿ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಸಂಬಂಧಿತ ಶಾಲೆಗಳಿಗೆ ಅನುದಾನವನ್ನು ಪ್ರತಿ ತರಗತಿಗೆ ರೂ. 6000/ -ರಂತೆ ಬಿಡುಗಡೆ ಮಾಡಲಾಗಿದೆ. |
| ಆ) | ಬೆಳ್ತಂಗಡಿಯ ಬಳಂಜದ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳನ್ನು ಟ್ರಕ್ ನಲ್ಲಿ ಫೀಲ್ಡ್ ಟ್ರಿಪ್‌ಗೆ ಕರೆದೊಯ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಬಂದಿದೆ.<br>ಇಲಾಖಾ ಪೂರ್ವಾನುಮತಿ ಪಡೆಯದೇ ನಿಯಮಬಾಹಿರವಾಗಿ ಮಣ್ಣು ಸಾಗಾಟ ಮಾಡುವ ವಾಹನಗಳಾದ ಟಿಪ್ಪರ್/ಪಿಕ್‌ಅಪ್ ವಾಹನಗಳನ್ನು ಬಳಸಿ ಅಸುರಕ್ಷಿತವಾಗಿ ಮಕ್ಕಳನ್ನು ಕರೆದುಕೊಂಡು ಹೋಗಿರುವುದು ಗಮನಕ್ಕೆ ಬಂದಿದ್ದು, ದಕ್ಷಿಣ ಕನ್ನಡ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಸದರಿ ಶಾಲಾ ಮುಖ್ಯ ಶಿಕ್ಷಕರನ್ನು ಅಮಾನತ್ತುಗೊಳಿಸಿರುತ್ತಾರೆ. |
| ಇ) | ಮಕ್ಕಳನ್ನು ಶೈಕ್ಷಣಿಕ ಪ್ರವಾಸ ಫೀಲ್ಡ್ ಟ್ರಿಪ್ ಕರೆದುಕೊಂಡು ಹೋಗುವ ಸಮಯದಲ್ಲಿ ಅಗತ್ಯ ಮುಂಜಾಗರೂಕತೆ ಕೈಗೊಳ್ಳುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯೋಪಾಧ್ಯಾಯರಿಗೆ ಸರ್ಕಾರ ನಿರ್ದೇಶನ/ಆದೇಶ ನೀಡಲು ಕೈಗೊಂಡ ಕ್ರಮವೇನು; | ಮಕ್ಕಳನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗುವ ಕುರಿತು ಇಲಾಖೆಯಿಂದ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಸುತ್ತೋಲೆ ದಿನಾಂಕ:21.11.2023, ದಿನಾಂಕ: 14.11.2022 ಮತ್ತು ದಿನಾಂಕ: 27.01.2011 ರಲ್ಲಿ ಶೈಕ್ಷಣಿಕ ಪ್ರವಾಸದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತೆ ಕ್ರಮಗಳು ಮತ್ತು ಅನುಸರಿಸಬೇಕಾದ ನಿಯಮಗಳ ಬಗ್ಗೆ ತಿಳಿಸಲಾಗಿರುತ್ತದೆ. |
| ಈ) | ಪಠ್ಯ ಚಟುವಟಿಕೆಗಳಿಗೆ ಪೂರಕವಾದ ಫೀಲ್ಡ್ ಟ್ರಿಪ್ ಗಳಿಗೆ ಸರ್ಕಾರದ ವತಿಯಿಂದ ವಾಹನ ವ್ಯವಸ್ಥೆ ಮಾಡಲಾಗುವುದೇ; ಇಲ್ಲದೆ ಫೀಲ್ಡ್ ಟ್ರಿಪ್ ಏರ್ಪಾಡು ಮಾಡುವ ಬಗೆ ಹೇಗೆ; ಸರ್ಕಾರ ಇದರ ಬಗ್ಗೆ ಕೈಗೊಳ್ಳುವ ಕ್ರಮಗಳೇನು? | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರು ದಿನಾಂಕ:27.01.2011 ರಂದು ಸುತ್ತೋಲೆ ಹೊರಡಿಸಿ ಶಾಲಾ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. |

**ಇಪಿ 59 ಪಿಎಂಎ 2026**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು